# ವೆಂಕಟಮಖಿಯ ಚತುರ್ದಂಡೀ ಸಂಗೀತ

ರಾ.ಸ.ನಂದಕುಮಾರ್

ನಮ್ಮ ಸಂಗೀತವಾಹಿನಿಯ ಗಂಭೀರಪ್ರವಾಹದಲ್ಲಿ ವೆಂಕಟಮಖಿಯ ಚತುರ್ದಂಡೀ ಪ್ರಕಾಶಿಕೆಯೂ ರಾ.ಸತ್ಯನಾರಾಯಣರವರ ಕರ್ನಾಟಕ ಸಂಗೀತವಾಹಿನಿಯೆಂಬ ಉದ್ಗ್ರಂಥದಲ್ಲಿ ನಾದಯಜ್ಞದೀಕ್ಷಿತ ವೆಂಕಟಮಖಿಯೆಂಬ ಅಧ್ಯಾಯವೂ ಒಂದು ಸ್ವಾರಸ್ಯಕರವಾದ ತಿರುವನ್ನು ತೋರುತ್ತದೆ. ನಮ್ಮ ಸಂಗೀತವು ತರ್ಕಶುದ್ಧಿ, ಪ್ರಮೇಯಶುದ್ಧಿಗಳ ರಾಜಬೀದಿಯಲ್ಲಿ ಹೊರಟು ವಿಕಾಸಗೊಳ್ಳುತ್ತ ತನ್ನತನವನ್ನು ಸೃಷ್ಟಿಸಿ ಸ್ಥಾಪಿಸಿಕೊಂಡ ಅಚ್ಚುಕಟ್ಟುಮೈಲಿಗಲ್ಲನ್ನು ವೆಂಕಟಮಖಿಯ ಚತುರ್ದಂಡೀ ಪ್ರಕಾಶಿಕೆಯಲ್ಲಿ ಕಾಣಬಹುದಾದರೆ, ಲಕ್ಷ್ಯಲಕ್ಷಣ, ಪ್ರಯೋಗಪ್ರಕ್ರಿಯೆಯಲ್ಲಿ ಸದಾ ತಮ್ಮನ್ನು ತಾವೇ ತೊಡಗಿಸಿಕೊಂಡಿರುವ ಅಸಾಧಾರಣ ಪಂಡಿತ, ಶಾಸ್ತ್ರ–ಸಂಪ್ರದಾಯ–ಸಂಶೋಧನಾ ವಿದಗ್ಧ, ಪರಂಪರೆ–ಒಳನೋಟಗಳ ಅಪಾರ ಅರಿವಿನ ಪ್ರಯೋಗಶೀಲ, ನಮ್ಮ ಕರ್ನಾಟಕದ ಅನನ್ಯ ಹೆಮ್ಮೆಯ ಮಹಾವಿದ್ವಾಂಸ ರಾ.ಸತ್ಯನಾರಾಯಣರ ಸರಳ–ಚೆತೋಹಾರಿಯಾಗಿ ಮಧುರಶೈಲಿಯಲ್ಲಿ ಕಟ್ಟಿಬೆಳೆಸಿರುವ 'ಕರ್ನಾಟಕಸಂಗೀತವಾಹಿನಿ'ಯಲ್ಲಿ ವೆಂಕಟಮಖಿಯ ಅಧ್ಯಾಯವು ಅವರ ನಿರೂಪಣಾಶೈಲಿಯಲ್ಲೂ, ಆಳವಾದ ಸಂಶೋಧನೆಯ ಫಲರೂಪದಲ್ಲೂ ಅವರಿಗೇ ವಿಶಿಷ್ಟವಾದ ದೈವದತ್ತವಾದ ಪ್ರತ್ಯುತ್ಪನ್ನಮತೀ ಜ್ಞಾನದೀಪ್ತಿಯಿಂದಲೂ ಸಮೃದ್ಧವಾದ ಖಚಿತ–ವಿಸ್ತಾರ–ವಿದ್ವತ್ತನ್ನು ಕಾಣಬಹುದು.  ಈ ಎರೆಡೂ ಮೈಲಿಗಲ್ಲುಗಳೇ. ಒಂದು ಚಾರಿತ್ರಿಕ ಸತ್ಯ, ಇನ್ನೊಂದು ಪ್ರತ್ಯಕ್ಷಪ್ರಮಾಣ.

ಚತುರ್ದಂಡೀಪ್ರಕಾಶಿಕೆಯು ನಮ್ಮ ಸಮಕಾಲೀನ ಕರ್ನಾಟಕಸಂಗೀತಕ್ಕೆ ನಾಂದಿಯಂತಿರುವ ಆಧಾರಭೂತ ಪ್ರಾಮಾಣಿಕ ಗ್ರಂಥ.  ಇದು ಹತ್ತು ಪ್ರಕರಣಗಳನ್ನು ಒಳಗೊಂಡಿದೆ. ಮೊದಲ ಐದು ಪ್ರಕರಣಗಳಲ್ಲಿ ಶ್ರುತಿ, ಸ್ವರ, ಗಮಕ, ಮೇಳ, ರಾಗ ಇವುಗಳನ್ನೂ, ಆರನೆಯದರಲ್ಲಿ ಆಲಾಪವಿಧಾನವನ್ನೂ, ಏಳನೆಯ ಪ್ರಕರಣದಲ್ಲಿ ಠಾಯವನ್ನೂ, ಎಂಟರಲ್ಲಿ ಗೀತವನ್ನೂ, ಒಂಭತ್ತರಲ್ಲಿ ಪ್ರಬಂಧವನ್ನೂ ಹಾಗೂ ಹತ್ತನೆಯ ಪ್ರಕರಣದಲ್ಲಿ ಇವೆಲ್ಲದರ ತಲಪ್ರತಿಷ್ಠೆ ಎಂದರೆ ಸಾಮ್ಯವನ್ನೂ ನಿರೂಪಿಸುತ್ತದೆ. ಅನುಷ್ಟುಪ್ ಛಂದಸ್ಸಿನ ಸರಳಶೈಲಿಯ ಸಂಸ್ಕೃತಿದಲ್ಲಿದೆ ಈ ಗ್ರಂಥ.

ಇದರ ಕರ್ತೃವು ವೆಂಕಟಾಧ್ವರಿ, ವೆಂಕಟೇಶ್ವರದೀಕ್ಷಿತನೆಂದೆಲ್ಲಾ ಕರೆಯಲ್ಪಟ್ಟರೂ ವೆಂಕಟಮಖಿಯೆಂದೇ ಪ್ರಸಿದ್ಧನಾಗಿದ್ದಾನೆ. ಇವನ ತಂದೆ ಅದ್ವೈತಾಚಾರ್ಯ, ಮಹಾವೇದಾಧ್ಯಯನಶೀಲ, ಶಂಕರಮುನಿಮತಪ್ರತಿಷ್ಠಾಪನಕೋವಿದ ಮತ್ತು ತಂಜಾವೂರಿನಲ್ಲಿ ನಾಯಕಪ್ರಭುಗಳ ವಂಶದ 140 ವರ್ಷಗಳ ಆಳ್ವಿಕೆಯನ್ನು ಸ್ಥಾಪಿಸಿದ ಶ್ರೀ ಗೋವಿಂದದೀಕ್ಷಿತ. ತಾಯಿ ಸರ್ವಕ್ರತುಯಜ್ಞದ ಅವಭೃತಸ್ನಾನದಿಂದ ಪವಿತ್ರಳಾದ ನಾಗಾಂಬಿಕೆ. ಅಣ್ಣ ಮತ್ತು ವೇದ–ವ್ಯಾಕರಣಾದಿ ಸಕಲ ವಿದ್ಯಾಗುರು ಶ್ರೀ ಯಜ್ಞನಾರಾಯಣದೀಕ್ಷಿತ.  ಇವರು ಕನ್ನಡಿಗರೆಂದೂ, ಕರ್ಣಾಟಕಸ್ಮಾರ್ತಬ್ರಾಹ್ಮಣರೆಂದೂ ಮತ್ತು ಕರ್ಣಾಟಕದ ಶಿವಮೊಗ್ಗಜಿಲ್ಲೆಯವನೆಂದೂ ಸಂಗೀತಸಂಪ್ರದಾಯಪ್ರದರ್ಶಿನಿಯ ಕರ್ತೃ ಸುಬ್ಬರಾಮದೀಕ್ಷಿತನು ಹೇಳುತ್ತಾನೆ.

ನನ್ನ ಇಂದಿನ ಸೋದಾಹರಣ ಭಾಷಣವು, ಭಾಷಣಕ್ಕಿಂತಲೂ ಉದಾಹರಣ ಪ್ರಾತ್ಯಕ್ಷಿಕೆಗಳಿಂದ ತುಂಬಿರಬೇಕೆಂದು ನನ್ನ ಆಸೆ. ಆದುದರಿಂದ ಚತುರ್ದಂಡೀಪ್ರಕಾಶಿಕೆಯನ್ನು ಪ್ರಕಾಶಿಸುವ ಕರ್ಣಾಟಕ ಸಂಗೀತವಾಹಿನಿಯ ವೆಂಕಟಮಖಿಯ ಅಧ್ಯಾಯದ ಸಮಗ್ರಚಿತ್ರಣವನ್ನು ಇಲ್ಲಿ ಪ್ರಸ್ತುತಪಡಿಸಲು ನಾನು ಪ್ರಯತ್ನವೇ ಮಾಡುವುದಿಲ್ಲ.  ಬದಲು, ರಾ.ಸ ರವರ ಚತುರ್ದಂಡೀ ಲಕ್ಷಣನಿರೂಪಣವು ಅದರ ಲಕ್ಷ್ಯಕ್ಕೆ ಹೇಗೆ ಉಪಯುಕ್ತ ಹಾಗೂ ಇವುಗಳ ಪ್ರಯೋಗವು ಈಗಿನ ಕರ್ಣಾಟಕ ಸಂಗೀತ ಕಛೇರೀ ಪ್ರಯೋಗಗಳಿಗೂ, ಸಂಗೀತ ಪಾಠಕ್ಕೂ ಅದೆಷ್ಟು ಮೆರುಗನ್ನು ತರುತ್ತದೆಂಬುದರ ಸೋದಾಹರಣವನ್ನು ಮಾಡಲಿಚ್ಛಿಸುತ್ತೇನೆ. ಆದರೆ ವೆಂಕಟಮಖಿಯು ಆತ್ಮಪ್ರತ್ಯಯದಿಂದ ತನ್ನ ಗ್ರಂಥದಲ್ಲಿ ನಿರೂಪಿಸಿದ ಮತ್ತು ಕರ್ಣಾಟಕಸಂಗೀತದಲ್ಲಿ ಇಂದಿಗೂ ಅಜರಾಮರವಾಗಿ ಉಳಿದುನಿಂತಿರುವ ಮೇಳಪದ್ಧತಿಯ ಬಗ್ಗೆ ಹೇಳದಿದ್ದರೆ ನನ್ನೀ ಪ್ರಸ್ತುತಿ ಅಸಂಪೂರ್ಣವಾದೀತು. ಪರ್ಯಾಯತತ್ತ್ವ, ಪ್ರತಿನಿಧಿತತ್ತ್ವಗಳನ್ನು ಅನ್ವಯಿಸಿ ಹನ್ನೆರಡು ಸ್ವರಸ್ಥಾನಗಳಲ್ಲಿ ಏಳನ್ನು ಇಟ್ಟುಕೊಂಡು ಎಪ್ಪತ್ತೆರಡು

ಮೇಳಗಳನ್ನು ಪಡೆಯುವುದು ಹೇಗೆ ವೆಂಕಟಮಖಿಯು ತೋರಿಸಿಕೊಟ್ಟಿದ್ದಾನೆ. ಈ ಮೇಳಪದ್ಧತಿಯ ಮಂಡನೆಯಾಗಿ ಮುನ್ನೂರು ವರ್ಷಗಳೇ ಕಳೆದಿದ್ದರೂ ಅದರ ಸತ್ತ್ವವು ಇನ್ನೂ ಹೆಚ್ಚುತ್ತಲೇ ಇದೆ. ಕರ್ಣಾಟಕಸಂಗೀತವು ಇನ್ನೂ ಇದರ ಪ್ರಭಾವದಲ್ಲೇ ಬೆಳೆಯುತ್ತದೆಂದೂ ಕಾಣುತ್ತದೆ. ಆದರೂ ಇವನಿಗಿಂತಲೂ ನೂರುವರ್ಷಗಳಷ್ಟು ಹಿಂದೆಯೇ ಕನ್ನಡಿಗನಾದ ಪಂಡರೀಕವಿಠಲನು ತನ್ನ ರಾಗಚಂದ್ರೋದಯದಲ್ಲಿ ಇದೇ ಹನ್ನೆರೆಡು ಸ್ವರಸ್ಥಾನಗಳಿಗೆ ಪರ್ಯಾಯ–ಪ್ರತಿನಿಧಿತತ್ತ್ವಗಳನ್ನು ಅನ್ವಯಿಸುತ್ತಾ ಶುದ್ಧಮಧ್ಯಮಸ್ಥಾನಕ್ಕೆ ಪರ್ಯಾಯತತ್ತ್ವವನ್ನು ಹೆಚ್ಚು ತಾರ್ಕಿಕವಾಗಿಯೂ ಪ್ರಮೇಯಶುದ್ಧವಾಗಿಯೂ ಪ್ರಯೋಗಿಸಿ ಊಧ್ವಗಾಂಧಾರಸ್ವರಸ್ಥಾನವನ್ನು ಗುರುತಿಸಿ ತನ್ಮೂಲಕವಾಗಿ ಎಪ್ಪತ್ತೆರಡು ಮೇಳಗಳಿಗಿಂತಲೂ ಇನ್ನೂ ಹದಿನೆಂಟು ಮೇಳಗಳನ್ನು ಪಡೆದು ಒಟ್ಟು ತೊಂಭತ್ತು ಮೇಳಗಳನ್ನು ನಿರೂಪಿಸಿದ್ದಾನೆ. ಮೇಳವೆಂಬ ಪರಿಕಲ್ಪನೆಯು ಶ್ರೀವಿದ್ಯಾರಣ್ಯಶ್ರೀಚರಣರಿಂದ ಕ್ರಿ.ಶ.14ನೆಯ ಶತಮಾನದಲ್ಲಿ ಉದ್ಘಾಟಿತವಾಗಿ ಕಲ್ಲಿನಾಥ, ರಾಮಾಮಾತ್ಯ, ಸೋಮನಾಥ ಮೊದಲಾದ ಶಾಸ್ತ್ರಪ್ರವರ್ತಕರಿಂದ ಇಂಬುಗೊಂಡು ವೆಂಕಟಮಖಿಯಲ್ಲಿ ಶಾಶ್ವತವೂ ಸ್ಥಿರವೂ ಆದ ಕಲ್ಪನೆಯಾಗಿ ತನ್ನ ಸ್ವರೂಪವನ್ನೂ ಅಂತಃಸತ್ತ್ವವನ್ನೂ ಉಳಿಸಿಕೊಂಡಿದ್ದು ತುಂಬ ಸ್ವಾರಸ್ಯಕರವಾಗಿದೆ.

ಚತುರ್ದಂಡಿಯೆಂದರೆ ಆಲಾಪ, ಠಾಯ, ಗೀತ ಮತ್ತು ಪ್ರಬಂಧ ವೆಂಬ ನಾಲ್ಕು ಪ್ರಭೇದಗಳು.

**ಆಲಾಪ:** – ರಾಗಾಲಾಪನೆಯ ವಿವಿಧ ಅವಯವಗಳಾದ ಆಕ್ಷಿಪ್ತಿಕಾ, ರಾಗವರ್ಧನೀ, ವಿದಾರೀ ಇವುಗಳಲ್ಲಿ ಸಂಗೀತವಿದ್ವಾಂಸರು ಸ್ವಸಮಯದಲ್ಲಿ ಇಟ್ಟ ಆಯಿತ್ತ, ಯಡುಪು, ಮುಕ್ತಾಯಿ ಎಂಬ ಪರಂಪರಾನುಗತ ಹೆಸರುಗಳನ್ನು ಚತುರ್ದಂಡೀಪ್ರಕಾಶಿಕೆಯ ಆರನೆಯ ಪ್ರಕರಣದಲ್ಲಿ ಕಾಣಬಹುದು. ಇವುಗಳಲ್ಲಿ ರಾಗವರ್ಧಿನೀಯಲ್ಲಿ ಸ್ಥಾಯಿಗಳನ್ನಿಟ್ಟು ರಾಗವನ್ನು ಬೆಳೆಸುವುದು ಹೇಗೆ ಎಂಬುದನ್ನೂ ವೆಂಕಟಮಖಿ ವಿವರಿಸುತ್ತಾನೆ. ಇಲ್ಲಿಯೇ ಮಕರಿಣೀ ಎಂಬ ನಾಮಾಂತರವುಳ್ಳ ವರ್ತನೀ ಯ ಆಲಾಪ ಅವಯವವನ್ನೂ ನಿರೂಪಿಸಿಸದ್ದಾನೆ. ಹೀಗೆ ಐವತ್ತು ರಾಗಗಳ ಆಲಾಪಕ್ರಮವನ್ನು ತನ್ನ ಗುರುವಾದ ತಾನಪ್ಪಶೇಖರನು ಸಂಗೀತಲಕ್ಷ್ಯದಲ್ಲಿ ಸ್ಥಿರಗೊಳಿಸಿದ್ದನ್ನೂ ವೆಂಕಟಮಖಿಯು ಸ್ಮರಿಸಿದ್ದಾನೆ. ಸ್ವಾರಸ್ಯವೆಂದರೆ ಈ ರೀತಿಯು ಆಧುನಿಕ ರಾಗಾಲಾಪನ ಕ್ರಮಕ್ಕೆ ಹತ್ತಿರವಾಗಿದೆ. ಆದುದರಿಂದ ಇದು ಅಭ್ಯಾಸಾರ್ಹವಾಗಿದೆ.

**ಠಾಯಪ್ರಕರಣ:** – ಏಳೇ ಶ್ಲೋಕವುಳ್ಳದ್ದು ಏಳನೆಯ ಠಾಯಪ್ರಕರಣ. ಪೂರ್ವಾಚಾರ್ಯರು 'ಸ್ಥಾಯೀ' ಎಂದಿದ್ದು ಅಪಭ್ರಂಶಗೊಂಡು ಠಾಯ ಎಂದಾಗಿದೆ. ಹೀಗೆ ಪೂರ್ವಾಚಾರ್ಯರು ಸ್ಥಾಯಿಯನ್ನು ಹೇಳಿದ್ದರೂ ಅವುಗಳನ್ನು ವರ್ಣಿಸಿಲ್ಲ. ಅದನ್ನು ಮಾಡಿರುವುದು ವೆಂಕಟಮಖಿಯೇ. ಅವನು ಹೀಗೆನ್ನುತ್ತಾನೆ.

ರಾಗದಲ್ಲಿ ಯಾವುದಾದರೊಂದು ಸ್ವರವನ್ನು ಸ್ಥಾಯಿಯನ್ನಾಗಿ ಮಾಡಿ ಅದರ ಮುಂದಿನ ನಾಲ್ಕು ಸ್ವರಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದರಂತೆ ನಾಲ್ಕುತಾನಗಳನ್ನು ಹಾಡಿ ನಂತರ ಇವೇ ಸ್ವರಗಳಲ್ಲಿ ಅವರೋಹಣದಲ್ಲಿಯೂ ಹೀಗೆಯೇ ನಾಲ್ಕು ತಾನಗಳನ್ನು ಹಾಡಬೇಕು. ಹೀಗೆ ಆಗುವ ಎಂಟುತಾನಗಳಲ್ಲಿ ಬರುವ ಯಾವುದಾದರೊಂದು ಸ್ವರವನ್ನು ಸ್ಥಾಯಿಯನ್ನಾಗಿ ಕಲ್ಪಸಿಕೊಂಡು ಅದರಲ್ಲಿ ತಾನವನ್ನು ಮಾಡಿ ಮಂದ್ರಷಡ್ಜದಲ್ಲಿ ನ್ಯಾಸಮಾಡಬೇಕು. ಇದಾದ ನಂತರ ಒಂದು ಮುಕ್ತಾಯಿಯನ್ನು ಹಾಡಬೇಕು. ಹೀಗೆ ಹಾಡುವ ಠಾಯವನ್ನು ಲಕ್ಷ್ಯದಲ್ಲಿ ಸ್ಥಾಪಿಸಿದ ಕೀರ್ತಿ ವೆಂಕಟಮಖಿಯ ಗುರುವಾದ ತಾನಪ್ಪಶೇಖರನಿಗೆ ಸಲ್ಲಬೇಕು. ಅಲ್ಲಿಂದ ಮುಂದೆ ಕ್ರಿ.ಶ. 1730ರ ವೇಳೆಗೆ ತಂಜಾವೂರು ಪ್ರಾಂತ್ಯದಲ್ಲಿ ಪ್ರಸಿದ್ಧವಾಗಿದ್ದ ಠಾಯೆಗಳನ್ನು ತುಳಜನು ತನ್ನ ಗ್ರಂಥದಲ್ಲಿ ವಿಪುಲವಾಗಿ ಉದಹರಿಸಿದ್ದಾನೆ. ಶ್ರೀಪುರಂದರದಾಸರು ಠಾಯೆಗಳನ್ನು ರಚಿಸಿದ್ದರೆಂದು ಪ್ರಸನ್ನವೆಂಕಟದಾಸರು ತಮ್ಮ ಒಂದು ಹಾಡಿನಲ್ಲಿ ಹೇಳಿಕೊಂಡಿದ್ದಾರೆ.

ಗೀತ: – ವೆಂಕಟಮಖಿಯು ತನ್ನ ಎಂಟನೆಯ ಗೀತಪ್ರಕರಣದಲ್ಲಿ ಗೀತವೆಂಬುದು ಎಲ್ಲ ಹಾಡಿಗೂ ಸಾಮಾನ್ಯ ವಾಚಿಕವಾದರೂ ಅದು ಸಂಗೀತಶಾಸ್ತ್ರಮರ್ಯಾದೆಯಲ್ಲಿ ಸಾಲಗಸೂಡಪ್ರಬಂಧಗಳಿಗೆ ಪರಂಪರಾನುಗತವಾಗಿ ವ್ಯವಹೃತವಾದ ವಿಶೇಷನಾಮವಾಗಿದೆ ಎಂದಿದ್ದಾನೆ. ಈ ಸಾಲಗಸೂಡಪ್ರಬಂಧವು ನಮಗೆ ಇಂದು ಪರಿಚಿತವಾಗಿರುವ ಸುಳಾದಿಗಳಿಗೆ ಮಾತೃಸ್ಥಾನದಲ್ಲಿತ್ತು. ಧ್ರುವಾದಿ ಏಕತಾಲ್ಯಂತವಾದ ಈ ಏಳು ಹಾಡಿನ ರೀತಿಯು ತಮ್ಮ ಸಮಷ್ಟಿಪ್ರಯೋಗದಲ್ಲಿ ಒಂದೇ ಪ್ರಬಂಧವೆನಿಸುತ್ತಿತ್ತು. ಇವುಗಳಲ್ಲಿದ್ದ ಧ್ರುವಾದಿ ದೇಶೀತಾಳಗಳಲ್ಲಿನ ಅಂಗಗಳಾದ ಲಘು, ಗುರು, ಪ್ಲುತ, ಕಾಕಪಾದಗಳನ್ನು ಕಳೆದು ಲಘು, ದ್ರುತ, ಅನುದ್ರುತಗಳೆಂಬ ಮೂರೇ ಅಂಗಗಳನ್ನು ಉಳಿಸಿ, ದೇಶೀತಾಳಗಳಲ್ಲಿನ ವಿರಾಮದ ಕಲ್ಪನೆಯನ್ನು ಲಘುಜಾತಿಗಳಾಗಿ ಮಾರ್ಪಡಿಸಿ ಸಾರ್ವತ್ರಿಕಗೊಳಿಸಿದ ಕೀರ್ತಿ ನಮ್ಮ ಹರಿದಾಸರಿಗೆ ಸಲ್ಲಬೇಕು. ಈ ಸೂಳಾದಿತಾಳಗಳನ್ನು ಶಾಸ್ತ್ರಪರಿಧಿಯೊಳಗೆ ಸೇರಿಸಿ ವರ್ಣಿಸಿದ ಕೀರ್ತಿಯು ಪೋಲೂರಿ ಗೋವಿಂದಕವಿಗೂ ನಂತರ ವೆಂಕಟಮಖಿಗೂ ಸಲ್ಲಬೇಕು. ಇಲ್ಲಿಂದ ಎಪ್ಪತ್ತೈದು ವರ್ಷಗಳನಂತರ ತುಳಜನು ತನ್ನ ಪ್ರಬಂಧಾಧ್ಯಾದಲ್ಲಿ ಶ್ರೀಪುರಂದರದಾಸರು ರಚಿಸಿದ 'ಹಸುಗಳ ಕರೆವ ಧ್ವನಿ' ಎಂಬ ಸುಳಾದಿಯನ್ನು ಉಲ್ಲೇಖಿಸುತ್ತಾನೆ. ಆದುದರಿಂದ ಈ ಗೀತಪ್ರಕರಣದಲ್ಲಿ ನಾನು ಆ ಸುಳಾದಿಯನ್ನೇ ನನ್ನ ಪ್ರಾತ್ಯಕ್ಷಿಕೆಯನ್ನಾಗಿಟ್ಟುಕೊಂಡಿದ್ದೇನೆ.

ಪ್ರಬಂಧ:– ಈ ಒಂಭತ್ತನೆಯ ಪ್ರಕರಣಕ್ಕೆ ಸಂಪೂರ್ಣ ಆಕರ ವಸ್ತುವನ್ನಾಗಿ ವೆಂಕಟಮಖಿಯು ಸಂಗೀತ ರತ್ನಾಕರವನ್ನೇ (ಆದರೆ ಸ್ಮರಿಸಿಕೊಳ್ಳದೆ) ಬಳಸಿಕೊಂಡಿದ್ದಾನೆ. ಪ್ರಾಚೀನ ಆಚಾರ್ಯರು ವರ್ಣಿಸಿರುವ ಎಲ್ಲ ಪ್ರಬಂಧಗಳನ್ನೂ ತಾನೂ ಉಲ್ಲೇಖಿಸುತ್ತೇನೆಂದು ಪ್ರತಿಜ್ಞೆಮಾಡಿ ವೆಂಕಟಮಖಿಯು ಅರವತ್ತೆಂಟು ಪ್ರಬಂಧಗಳನ್ನು ಈ ಪ್ರಕರಣದಲ್ಲಿ ವರ್ಣಿಸಿದ್ದೇನೆಂದು ಹೇಳಿದ್ದರೂ ನಲವತ್ತು ಪ್ರಬಂಧಗಳಷ್ಟು ಮಾತ್ರ ಇರುವ ಚತುರ್ದಂಡೀಪ್ರಕಾಶಿಕೆಯು ನಮಗೆ ಇಂದು ದೊರೆತಿದೆ. ವೆಂಕಟಮಖಿಯು ಕೇವಲ ಪೂರ್ವಾಚಾರ್ಯಮತಾನುಸಾರಿಯಾಗಿ ಗೀತ ಪ್ರಬಂಧಗಳನ್ನೇ ವರ್ಣಿಸುತ್ತಾ, ಆದರೆ, ತನ್ನ ಕಾಲದಲ್ಲೇ ಪ್ರಸಿದ್ಧಿಪಡೆದಿದ್ದ ಹರಿದಾಸರ ಸುಳಾದಿಗಳನ್ನೂ ದೇವರನಾಮಗಳು, ಉಗಾಭೋಗಗಳನ್ನೂ ವರ್ಣಿಸದಿರುವುದು ಆಶ್ಚರ್ಯ. ಆದರೆ, ಈ ಪ್ರಬಂಧಾಧ್ಯಾಯವು ಸಂಪೂರ್ಣವಾಗಿ ದೊರೆತಿಲ್ಲವಷ್ಟೆ. ಹೀಗಾಗಿ ಇದರ ಕೊನೆಗೆ ಅವುಗಳ ಉಲ್ಲೇಖ–ವರ್ಣನೆಗಳಿತ್ತೇನೋ ಎಂಬ ಶಂಕೆ ನಮಗೆ ಮೂಡದಿರದು.